**ದಿನಾಂಕಃ 11/09/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು: 1 ರಿಂದ 8 ಪ್ರತಿವಾದಿಗಳ ಪರ ಶ್ರೀ ಸಿ.ಕೆ.ಎಂ ವಕೀಲರಿಂದಃ**

1. ನನ್ನ ಸ್ವತ್ತಿನಲ್ಲಿದ್ದ ತೆಂಗಿನ ಮರಗಳಿಗೆ ನಷ್ಟವುಂಟುಮಾಡಿದ್ದಾರೆ ಅದ್ದರಿಂದ ನ್ಯಾಯಾಲಯಕ್ಕೆ ಬಂದಿದ್ದೇನೆ. ನನ್ನ ನಿವೇಶನ ಸಂಃ1. ಅದರ ಜಂಜರ್ ನಂಬರ್ ಮತ್ತು ಅಸ್ಸೆಸ್ಮೆಂಟ್ ನಂಬರ್ ಗೊತ್ತಾ ಎಂದರೆ ಸಾಕ್ಷಿಯು ದಾಖಲೆ ನೀಡಿದ್ದೇನೆಂದು ನುಡಿಯುತ್ತಾರೆ. ದಾವಾಸ್ವತ್ತು ಪೂರ್ವ-ಪಶ್ಚಿಮ 40 ಅಡಿ ಉತ್ತರ-ದಕ್ಷಿಣ 60 ಅಡಿ ಇದೆ. ಅದರ ಚಕ್ಕುಬಂದಿ ಉತ್ತರಕ್ಕೆ ಸಿದ್ದಪ್ಪನವರ ಮನೆ, ದಕ್ಷಿಣಕ್ಕೆ ನನ್ನ ಹೆಂಡತಿಗೆ ನೀಡಿದ ಜಾಗ, ಪೂರ್ವಕ್ಕೆ ಕರಿಯಪ್ಪನವರ ಮನೆ, ಪಶ್ಚಿಮಕ್ಕೆ ಸೊಸೈಟಿ ಗೋಡೌನ್. ದಾವಾಸ್ವತ್ತನ್ನು ಸರ್ಕಾರದವರು 15-18 ವರ್ಷಗಳ ಹಿಂದೆ ಮಂಜೂರು ಮಾಡಿದ್ದರು. ಅದರ ತಾರೀಖು, ತಿಂಗಳು, ಇಸವಿ ಗೊತ್ತಿಲ್ಲ. ಮಂಜೂರು ಮಾಡುವ ಸಮಯದಲ್ಲಿ ದಾವಾಸ್ವತ್ತಿಗೆ ಚಕ್ಕುಬಂದಿ ನೀಡಿದ್ದರು. ಮಂಜೂರಾತಿ ಪತ್ರದಲ್ಲಿ ಪೂರ್ವಕ್ಕೆ ಕರಿಯಪ್ಪ ನವರ ಮನೆ, ಪಶ್ಚಿಮಕ್ಕೆ ಸರ್ಕಾರಿ ಸೊಸೈಟಿ, ಉತ್ತರಕ್ಕೆ ಸರ್ಕಾರಿ ರಸ್ತೆ, ದಕ್ಷಿಣಕ್ಕೆ ರಸ್ತೆ ಮತ್ತು ಸರ್ಕಾರಿ ಬೀದಿ ಎಂದು ತೋರಿಸಿದ್ದಾರೆ. ಅದರಲ್ಲಿ 60×40 ಅಡಿ ಅಳತೆ ಎಂದು ತೋರಿಸಿದ್ದಾರೆ.

2. ಸರ್ಕಾರದಿಂದ ಒಂದು ಕುಟುಂಬಕ್ಕೆ ಒಂದೇ ನಿವೇಶನ ಮಂಜೂರು ಮಾಡುವುದು ಎಂದರೆ ಸರಿ. ನನ್ನ ಹೆಂಡತಿ-ಗೌರಮ್ಮನಿಗೆ ಮಂಜೂರು ಮಾಡಿದ ಸ್ವತ್ತಿನ ದಾಖಲಾತಿ ಇದೆ. ನನ್ನ ಹೆಂಡತಿಗೆ ಮಂಜೂರಾದ ತಾರೀಖು, ತಿಂಗಳು, ಇಸವಿ ಗೊತ್ತಿಲ್ಲ. ನನಗೆ ಮಂಜೂರಾದ ಸ್ವತ್ತಿಗೆ ಇ-ಸ್ವತ್ತಾಗಿದೆ. ಇ-ಸ್ವತ್ತು ಮಾಡುವ ಮುನ್ನಾ ಪಂಚಾಯತಿಯವರು ಸ್ಥಳಕ್ಕೆ ಬಂದಿದ್ದರು. ನಾನೂ ಸಹ ಖುದ್ದಾಗಿ ಹಾಜರಿದ್ದೆ. ಇ-ಸ್ವತ್ತಿನಲ್ಲಿ ತಪ್ಪಾಗಿ ನಮೂದಿಸಿದ್ದಾರೋ, ಇಲ್ಲವೋ ಗೊತ್ತಿಲ್ಲ. ಸಾಕ್ಷಿಗೆ ಇ-ಸ್ವತ್ತನ್ನು ತೋರಿಸಿ, ಇದೇ ಇ-ಸ್ವತ್ತನ್ನು ಮಾಡಿಸಿದ್ದಾ ಎಂದರೆ ಸಾಕ್ಷಿಯು ತಲೆ ಕೆಡಿಸುತ್ತಾರೆಂದು ನುಡಿಯುತ್ತಾರೆ.

(ಮುಂದುವರೆದ ಪಾಟೀಸವಾಲನ್ನು ಮುಂದೂಡಲಾಯಿತು)

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**
**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**1 ನೇ ಹೆಚ್ಚುವರಿ ಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ,**
**ಪಿರಿಯಾಪಟ್ಟಣ.**